ಅ) ರಾಜ್ಯದಲ್ಲಿರುವ ಅಭಿವೃದ್ಧಿ ಮಂಡಳಿಗಳೆಷ್ಟು? ಅವು ಯಾವುವು.

ಆ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗಳಿಗೆ ಸರಕಾರ ಎಷ್ಟು ಹಣವನ್ನು ಕಳೆದ ಐದು ವರ್ಷಗಳಲ್ಲಿ ನೀಡಿದೆ.

ಇ) ಈ ಅಭಿವೃದ್ಧಿ ಮಂಡಳಿಗಳಿಂದ ಅಭಿವೃದ್ಧಿ ಯೋಜನೆಗಳು ಯಾವುವು?

ಈ) ಕರ್ನಾಟಕ, ಬೆಳಗಾಂ, ಧಾರವಾಡ, ವಿಜಾಪುರ, ಕಾರವಾರ ಒಳಗೊಂಡ ಮುಂಬಯಿ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲು ಸರಕಾರ ಉದ್ದೇಶಿಸಿದೆಯೇ, ಉದ್ದೇಶಿಸಿದಲ್ಲಿ ಯಾವಾಗ ಪ್ರಾರಂಭಿಸಲಾಗುವುದು.

ಉ) ಹಾಗಿದ್ದಲ್ಲಿ, ಕಾರಣವೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು ಮತ್ತು ಹಣಕಾಸು ಯೋಜನಾ ಮತ್ತು ಕಾರ್ಮಿಕ ಸಚಿವರು) :

ಅ) 3 ಅಭಿವೃದ್ಧಿ ಮಂಡಳಿಗಳಿವೆ. ಅವುಗಳು : ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ.

ಆ) ಕಳೆದ 5 ವರ್ಷಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 330.62 ಕೋಟಿ ರೂ.ಗಳನ್ನು ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿಗೆ 89.50 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ರಸ್ತೆ ಮತ್ತು ಸೇತುವೆಗಳು, ಶಾಲಾ ಕಟ್ಟಡಗಳು, ಆಸ್ಪತ್ರೆ ಕಟ್ಟಡಗಳು, ಗ್ರಾಮೀಣ ಹಾಗೂ ನಗರ ನೀರು ಸರಬರಾಜು ಯೋಜನೆಗಳು, ಗ್ರಾಮಿಣ ವಿದ್ಯುದ್ದೀಕರಣ, ವಸತಿ ಗೃಹ, ಇತ್ಯಾದಿಗಳು.

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ರಾಜ್ಯದ ಪೇಕ್ಷಣೀಯ ಸ್ಥಳಗಳು.

2637.- ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದ ಯಾವ ಯಾವ ಸ್ಥಳಗಳನ್ನು ಪ್ರೇಕ್ಷಣೀಯ ಸ್ಥಳಗಳೆಂದು ಸರ್ಕಾರವು ಗುರುತಿಸಿ ಘೋಷಿಸಿದೆ. ಈ ಸ್ಥಳಗಳಲ್ಲಿ ಸರ್ಕಾರವು ಪ್ರವಾಸಿಗಳಿಗಾಗಿ ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ?

2) ಈ ಸ್ಥಳಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ : ಆರ್ಥಿಕ ನೆರವನ್ನು ಪಡೆದುಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಅದರ ಮೊತ್ತವೆಷ್ಟು?

3) ಹೊಸಪೇಟೆ ಅಥವಾ ಕುಷ್ಟಗಿ ಸ್ಥಳಗಳಿಂದ ಪಟ್ಟದಕಲ್ಲು, ಬಾದಾಮಿ, ಐಹೊಳೆ ಕೂಡಲ ಸಂಗಮ ಮತ್ತು ಬಿಜಾಪುರ ಈ ಸ್ಥಳಗಳಿಗೆ ಭೇಟಿ ನೀಡಿ ಮತ್ತೆ ವಾಪಸ್ ಬರಲು ವಾಹನ ಸೌಕರ್ಯ ಒದಗಿಸಲಾಗುವುದೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ರಾಜ್ಯ ಪ್ರಮುಖ ಸ್ಥಳಗಳನ್ನು ರಾಜ್ಯ ಪ್ರವಾಸೋದ್ಯಮ ನೀತಿಯಲ್ಲಿ ಪ್ರಕಟಿಸಲಾಗಿದೆ. ರಾಜ್ಯದ ಪ್ರವಾಸೋದ್ಯಮ ನೀತಿಗೆ ಸಂಬಂಧಿಸಿದ ದಾಖಲೆಯು ಒಂದು ಸಾರ್ವಜನಿಕ ದಾಖಲೆಯಾಗಿದ್ದು ಎಲ್ಲರಿಗೂ ದೊರೆಯುತ್ತದೆ. ಈ ಪ್ರವಾಸೋದ್ಯಮ ನೀತಿಯ ಒಟ್ಟು 257 ಪ್ರವಾಸ್ಯೋದ್ಯಮ ಸ್ಥಳಗಳಿಂದು ಗುರುತಿಸಲಾಗಿದೆ. ಈ ಸ್ಥಳಗಳಲ್ಲಿ, ಪ್ರವಾಸೋದ್ಯಮ ಯೋಜನೆಗಳನ್ನು ನಿರ್ಮಿಸಲು ಖಾಸಗಿ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲಾಗುವುದು.

ಅಲ್ಲದೆ ಇಲಾಖೆ ವತಿಯಿಂದ ಪ್ರವಾಸಿಗಳ ಅನುಕೂಲಕಾಗಿ ಯಾತ್ರಿ ನಿವಾಸ, ಯಾಂತ್ರಿಕ ಪ್ರವಾಸಿಸಂಕೀರ್ಣ ಹೆದ್ದಾರಿ ಸೌಲಭ್ಯ, ಸುಲಬ್ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ.

ಆ) ಹೌದು. ಕೇಂದ್ರ ಸರ್ಕಾರದಿಂದಕ 1995-96ರ ವರೆಗೆ ಒಟ್ಟು 79 ಯೋಜನೆಗಳಿಗೆ ರೂ. 1309.78 ಲಕ್ಷಗಳ ಮಂಜೂರಾತಿ ಪಡೆದು ರೂ. 813.69 ಲಕ್ಷಗಳನ್ನು ಪಡೆಯಲಾಗಿದೆ.

ಇ) ಇಲ್ಲ.

ಸರಕಾರ ಸಾಲಗಳನ್ನು ಪಡೆಯುವ ಬಗ್ಗೆ

2566 (ಬಿ) - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಉಪ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಅರೆ ಸರ್ಕಾರಿ ಮತ್ತು ಖಾಸಗಿ ಹಣಕಾಸು ಸಂಸ್ಥೆಗಳಿಂದ ರಾಜ್ಯ ಸರ್ಕಾರ ಸಾಲಗಳನ್ನು ಪಡೆದುಕೊಳ್ಳಬಹುದೇ?

2) ಹಾಗಿದ್ದಲ್ಲಿ ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಅಗತ್ಯವೇ.

3) ಕರ್ನಾಟಕ ಸರ್ಕಾರ ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಹಣವನ್ನು ಸಾಲದ ರೂಪದಲ್ಲಿ ಪಡೆದುಕೊಂಡಿತ್ತು.

4) ಈ ಹಣವನ್ನು ಯಾವ ಉದ್ದೇಶಗಳ ಬಳಕೆಗಾಗಿ ವಿನಿಯೋಗಿಸಲಾಗಿತ್ತು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಹೌದು, ಭಾರತ ಸರ್ಕಾರದ ಯಾವುದಾದರೂ ಸಾಲಗಳು ಇನ್ನೂ ಬಾಕಿ ಉಳಿದಿದ್ದಲ್ಲಿ.

(ಲಕ್ಷರೂಪಾಯಿಗಳಲ್ಲಿ)

	91-92	92-93	93-94	94-95	95-96 (ಆರ್.ಇ)
ಮಾರುಕಟ್ಟೆ ಸಾಲಗಳು	15776.90	16848.64	17919.20	18183.42	24352.00
ನಬಾರ್ಡ್ ಸಾಲಗಳು	72.34	22.95	139.05	102.49	2544.00